

بسم اللهِ الرَّحمٰنِ الرَّحِيم

# ಪ್ರವಾದಿ ಚರಿತ್ರೆ – ಖೈಬರ್ ಯುದ್ಧ ಮತ್ತು ದಾತುಲ್ ರಿಖಾ ದಂಡಯಾತ್ರೆಯ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–04–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ-

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಖೈಬರ್ ಯುದ್ಧದ ನಂತರದ ಕೆಲವು ಘಟನೆಗಳನ್ನು ವಿವರಿಸಲಾಗುತ್ತಿದೆ. ಇದರಲ್ಲಿ ಅಹ್ಲೆ ತೈಮಾದೊಂದಿಗೆ ರಾಜಿ ಮಾಡಿದ ಘಟನೆಯೂ ಸೇರಿದೆ. ತೈಮಾವು ಮದೀನಾದಿಂದ ಸಿರಿಯಗೆ ಹೋಗುವ ದಾರಿಯಲ್ಲಿ ಒಂದು ಪ್ರಸಿದ್ಧ ನಗರವಾಗಿತ್ತು. ತೈಮಾದ ಜನರು ಸ್ವತಃ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ರಾಜಿಗಾಗಿ ಪ್ರಸ್ತಾಪಿಸಿದರು. ಅದನ್ನು ಹಝ್ರತ್ ಪೈಗಂಬರ್(ಸ) ಒಪ್ಪಿಕೊಂಡರು ಮತ್ತು ತೈಮಾದ ಯಹೂದಿಗಳನ್ನು ತಮ್ಮ ಆಸ್ತಿಪಾಸ್ತಿಗಳೊಂದಿಗೆ ತಮ್ಮ ಪ್ರದೇಶದಲ್ಲಿ ವಾಸಿಸಲು ಅನುಮತಿ ನೀಡಿದರು. ಇದೇ ಸಂದರ್ಭದಲ್ಲಿ ಫಜ್ರ್ ನಮಾಝ್ ನಿರ್ವಹಣೆಯಲ್ಲಿ ವಿಳಂಬವಾದ ಪ್ರಸ್ತಾಪವೂ ಇದೆ. ಅದರ ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ) ತಮ್ಮ ಸಹಾಬಿಯರೊಂದಿಗೆ ಖೈಬರ್ ಯುದ್ಧದಿಂದ ಹಿಂತಿರುಗುತ್ತಿದ್ದಾಗ ಇಡೀ ರಾತ್ರಿ ನಡೆದಿದ್ದರು. ಅನಂತರ ಹಝ್ರತ್ ಪೈಗಂಬರ್(ಸ)ರಿಗೆ ನಿದ್ರೆ ಬಂದಾಗ ಮದೀನಾದ ಸಮೀಪದಲ್ಲಿ ವಿಶ್ರಾಂತಿಗಾಗಿ ತಂಗಿದರು ಮತ್ತು ಹಝ್ರತ್ ಬಿಲಾಲ್(ರ)ರೊಡನೆ ಹೀಗೆ ಹೇಳಿದರು: ಇಂದಿನ ರಾತ್ರಿ ನಮ್ಮ ನಮಾಝಿನ ಸಮಯದ ಬಗ್ಗೆ ನೀವು ಗಮನವಹಿಸಬೇಕು. ಎಚ್ಚರವಾಗಿಯೇ ಇರಲು ಹಝ್ರತ್ ಬಿಲಾಲ್(ರ) ನಫಲ್ ನಮಾಝ್ ಅನುಷ್ಠಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹಾಗೂ ಸಹಾಬಿಯರು ನಿದ್ದೆ ಮಾಡಿದರು. ಫಜ್ರ್‌ನ ಸಮಯ ಸಮೀಪಿಸಿದಾಗ ಹಝ್ರತ್ ಬಿಲಾಲ್(ರ) ತಮ್ಮ ಸವಾರಿ ಮೃಗಕ್ಕೆ ಒರಗಿಕೊಂಡು ಕುಳಿತಾಗ ಬಿಲಾಲ್(ರ)ರ ಮೇಲೂ ನಿದ್ರೆ ಆವರಿಸಿತು. ಹೀಗಾಗಿ ಸೂರ್ಯನ ಬೆಳಕು ಅವರ ಮೇಲೆ ಬೀಳುವ ವರೆಗೂ ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರಲ್ಲಿ ಯಾರಿಗೂ ಎಚ್ಚರವಾಗಲಿಲ್ಲ. ಹಝ್ರತ್ ಬಿಲಾಲ್(ರ) ಸಹ ನಿದ್ದೆಯಿಂದ ಎಚ್ಚರಗೊಳ್ಳಲಿಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಎಲ್ಲರಿಗಿಂತ ಮೊದಲು ಎಚ್ಚರಗೊಂಡರು. ಹಝ್ರತ್ ಪೈಗಂಬರ್(ಸ) ಚಿಂತಿತರಾದರು ಮತ್ತು ಬಿಲಾಲ್(ರ)ರೊಡನೆ ಇದರ ಬಗ್ಗೆ ವಿಚಾರಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಡಲು ಆದೇಶಿಸಿದರು. ಸ್ವಲ್ಪ ದೂರ ಹೋದ ನಂತರ ಹಝ್ರತ್ ಪೈಗಂಬರ್(ಸ) ವುಝೂ ಮಾಡಿದರು ಮತ್ತು ಫಜ್ರ್ ನಮಾಝನ್ನು ಜಮಾಅತಾಗಿ ನಿರ್ವಹಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರಾದರೂ ನಮಾಝನ್ನು ಮರೆತರೆ ನೆನಪಾಗುವಾಗ ಅದನ್ನು ನಿರ್ವಹಿಸಬೇಕು, ಏಕೆಂದರೆ ನನ್ನ ಸ್ಮರಣೆಗಾಗಿ ನಮಾಝನ್ನು ನಿರ್ವಹಿಸಿರಿ ಎಂದು ಅಲ್ಲಾಹನು ಹೇಳಿದ್ದಾನೆ.

ಹಝ್ರತ್ ಅಬೂ ಮೂಸಾ ಅಶ್‌ಅರಿ(ರ) ವರದಿ ಮಾಡುತ್ತಾರೆ: ಮದೀನಾಗೆ ಹಿಂತಿರುಗುತ್ತಿದ್ದಾಗ ಜನರು ಜೋರಾಗಿ ಅಲ್ಲಾಹು ಅಕ್ಬರ್ ಎಂದು ತಕ್ಬೀರ್ ಹೇಳುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಧ್ವನಿಯನ್ನು ಕಡಿಮೆ ಮಾಡಿರಿ, ನೀವು ಕಿವುಡನನ್ನೋ ಅಥವಾ ಬಹಳ ದೂರ ಇರುವವನನ್ನೋ ಕರೆಯುತ್ತಿಲ್ಲ. ಮುಸ್ಲಿಮರ ಈ ಪ್ರಯಾಣವು ಹಿಜರಿ ಏಳರ ಮುಹರ್ರಮ್‌ನಲ್ಲಿ ಪ್ರಾರಂಭವಾಗಿತ್ತು, ಅಲ್ಲಾಹನ ಅನುಗ್ರಹಗಳು ಮತ್ತು ಯಶಸ್ಸುಗಳೊಂದಿಗೆ ಸಫರ್ ತಿಂಗಳ ಕೊನೆಗೆ ಅಥವಾ ರಬೀಉಲ್ ಅವ್ವಲಿನ ಆರಂಭದಲ್ಲಿ ಈ ಯಾತ್ರೆ ಮುಕ್ತಾಯಗೊಂಡಿತು. ಖೈಬರ್ ಯುದ್ಧದ ವಿಜಯವು ಮುಸ್ಲಿಮರ ಪರವಾಗಿ ಅನೇಕ ಪರಿಣಾಮಗಳನ್ನು ಬೀರಿತು, ಅವುಗಳಲ್ಲಿ ಒಂದು ಮುಖ್ಯವಾದ ಪರಿಣಾಮವೆಂದರೆ, ಮುಸ್ಲಿಮರ ವಿರುದ್ಧ ಸಂಚು ಮಾಡಲು ಬಯಸಿದ್ದ ಅರೇಬಿಯದ ಸುತ್ತಮುತ್ತಲಿನ ಅನೇಕ ಬುಡಕಟ್ಟು ಜನರು ಭಯಭೀತರಾದರು. ಅನೇಕ ಗೋತ್ರಗಳು ಸ್ವತಃ ಶಾಂತಿಗಾಗಿ ಕೈ ಚಾಚಿದರು. ವಿಧೇಯತೆ ತೋರಿಸುವುದು ಕ್ಷೇಮವೆಂದು ಕೆಲವರು ಮನವರಿಕೆ ಮಾಡಿಕೊಂಡರು. ಖೈಬರ್ ಯುದ್ಧದ ವಿಜಯದ ಒಂದು ದೊಡ್ಡ ಪರಿಣಾಮವೆಂದರೆ ಅರಬ್ ದೇಶದಲ್ಲಿ ಯಹೂದಿಗಳ ಶಕ್ತಿಯು ಕೊನೆಗೊಂಡಿತು.

ಈ ವಿಜಯವು ಮದೀನದ ಮುಸ್ಲಿಮರ ಆರ್ಥಿಕತೆಯ ಮೇಲೆ ದೊಡ್ಡ ಸಕಾರಾತ್ಮಕ ಪರಿಣಾಮವನ್ನು ಬೀರಿತು. ಖೈಬರ್ ಯುದ್ಧದ ವಿಜಯದ ನಂತರ ನಮಗೆ ಹೊಟ್ಟೆ ತುಂಬಾ ಊಟ ಸಿಗುತ್ತಿತ್ತು ಎಂದು ಹಝ್ರತ್ ಆಯಿಶ(ರ) ಸೇರಿದಂತೆ ಅನೇಕ ಸಹಾಬಿಯರು ವರದಿ ಮಾಡಿದ್ದಾರೆ.

ಖೈಬರ್‌ನ ನಂತರ ಝಾತುರ್ರಿಖಾಅ್ ಯುದ್ಧದ ಪ್ರಸ್ತಾಪವಿದೆ. ಈ ಯುದ್ಧಕ್ಕೆ ಆ ಹೆಸರು ಬರಲು ಕಾರಣವೆಂದರೆ ಆ ಪ್ರದೇಶದಲ್ಲಿ ಒಂದು ಮರ ಅಥವಾ ಬೆಟ್ಟ

ಇತ್ತು. ಅದರ ಹೆಸರಿನಿಂದ ಈ ಯುದ್ಧಕ್ಕೆ ಆ ಹೆಸರು ಬಂತು. ಮತ್ತೊಂದು ಕಾರಣವನ್ನು ಹೀಗೆ ವಿವರಿಸಲಾಗಿದೆ: ಈ ಯುದ್ಧದಲ್ಲಿ ಸಹಾಬಿಯರ ಬಳಿ ಬಹಳ ಕಡಿಮೆ ಸವಾರಿಗಳಿದ್ದವು. ಪ್ರಯಾಣದ ತೀವ್ರತೆ ಹಾಗೂ ಬಂಡೆಕಲ್ಲಿನ ನೆಲದಲ್ಲಿ ನಡೆಯುವುದರಿಂದ ಸಹಾಬಿಯರ ಕಾಲುಗಳು ಗಾಯಗೊಂಡಿದ್ದವು. ಅವರು ಹಳೆಯ ಹರಿದ ಬಟ್ಟೆಗಳನ್ನು ಕಟ್ಟಿ ಗಾಯಗಳಿಗೆ ಬ್ಯಾಂಡೇಜ್ ಹಾಕಿಕೊಳ್ಳುತ್ತಿದ್ದರು. ಬಟ್ಟೆಯ ಪಟ್ಟಿಗಳನ್ನು ರಿಖಾಅ್ ಎಂದು ಕರೆಯುವುದರಿಂದ ಈ ಯುದ್ಧಕ್ಕೆ ಆ ಹೆಸರು ಬಂತು ಎಂದೂ ಹೇಳಲಾಗುತ್ತದೆ. ಈ ಯುದ್ಧದ ದಿನಾಂಕದ ಬಗ್ಗೆ ಭಿನ್ನಾಭಿಪ್ರಾಯವಿದೆ. ಇತಿಹಾಸ ಮತ್ತು ಜೀವನಚರಿತ್ರೆಯ ಪುಸ್ತಕಗಳಲ್ಲಿ ಇದರ ದಿನಾಂಕವು ಹಿಜರಿ 4 ಅಥವಾ 5 ಎಂದು ಉಲ್ಲೇಖಿಸಲಾಗಿದೆ, ಆದರೆ ಇಮಾಮ್ ಬುಖಾರಿ(ರ) ಒಂದು ಬಲವಾದ ಸಾಕ್ಷ್ಯದ ಆಧಾರದ ಮೇಲೆ ಇದನ್ನು ಖೈಬರ್ ಯುದ್ಧದ ನಂತರ ಹಿಜರಿ 7ರಲ್ಲಿ ನಡೆದಿದೆ ಎಂದು ಹೇಳಿದ್ದಾರೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸಹ ತಮ್ಮ ಟಿಪ್ಪಣಿಗಳಲ್ಲಿ ಇದನ್ನು ಖೈಬರ್ ಯುದ್ಧದ ನಂತರ ಹಿಜರಿ 7ರಲ್ಲಿ ಸೇರಿಸಿದ್ದಾರೆ. ಈ ಯುದ್ಧಕ್ಕೆ ಕಾರಣವೆಂದರೆ ನಜದಿಯ ಪ್ರದೇಶದಲ್ಲಿ ಕೆಲವು ದರೋಡೆಕೋರರು ಪ್ರಯಾಣಿಕರಿಗೆ ತೊಂದರೆ ಕೊಡುತ್ತಿದ್ದರು. ಅವರನ್ನು ನಿಯಂತ್ರಿಸುವುದು ಕಷ್ಟಕರವಾಗಿತ್ತು. ಅದೇ ರೀತಿಯಲ್ಲಿ ಈ ಯುದ್ಧಕ್ಕೆ ಬೇರೊಂದು ಕಾರಣವನ್ನು ಹೀಗೆ ವಿವರಿಸಲಾಗಿದೆ: ಒಬ್ಬ ವ್ಯಾಪಾರಿ ಮದೀನಾಗೆ ಬಂದನು ಹಾಗೂ ಸಅ್‌ಲಬಾ ಮತ್ತು ಇತರ ಗೋತ್ರಗಳು ಮುಸ್ಲಿಮರ ವಿರುದ್ಧ ಸೈನ್ಯವನ್ನು ಕಳುಹಿಸಲು ತೀರ್ಮಾನಿಸಿದ್ದಾರೆ ಎಂಬ ಮಾಹಿತಿಯನ್ನು ಮದೀನದ ಜನರಿಗೆ ನೀಡಿದನು. ಈ ಸುದ್ದಿ ಹಝ್ರತ್ ಪೈಗಂಬರ್(ಸ)ಗೆ ತಲುಪಿದಾಗ ಹಝ್ರತ್ ಪೈಗಂಬರ್(ಸ) ಈ ಕಾರ್ಯಾಚರಣೆಯನ್ನು ಕೈಗೊಳ್ಳಲು ನಿರ್ಧರಿಸಿದರು. ಹಝ್ರತ್ ಪೈಗಂಬರ್(ಸ) ಮದೀನಾದಿಂದ ನಾನ್ನೂರು, ಏಳುನೂರು ಅಥವಾ ಎಂಟುನೂರು ಸಹಾಬಿಯರೊಂದಿಗೆ ಈ ಯುದ್ಧಕ್ಕಾಗಿ ಹೊರಟರು.

ಈ ಯುದ್ಧದಲ್ಲಿ ಸಲಾತುಲ್ ಖೌಫ್ (ಭಯದ ನಮಾಝ್) ನಿರ್ವಹಿಸಿದ ಉಲ್ಲೇಖವೂ ಇದೆ. ಹಝ್ರತ್ ಜಾಬಿರ್(ರ)ರ ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ನಖ್ಲ್‌ನಿಂದ ಝಾತುರ್ರಿಖಾಅ್‌ಗೆ ಹೋದರು ಮತ್ತು ಅಲ್ಲಿ ಗತ್‌ಫಾನ್ ಸೈನ್ಯವನ್ನು ಎದುರಿಸಿದರು. ಆದರೆ ಯಾವುದೇ ಹೋರಾಟ ನಡೆಯಲಿಲ್ಲ, ಆದರೆ ಮುಖಾಮುಖಿಯಾಗಿ ಇರುವುದರಿಂದ ದಾಳಿ ನಡೆಯುವ ಸಾಧ್ಯತೆ ಇತ್ತು. ಈ ವೇಳೆ ನಮಾಝಿನ ಸಮಯವಾದಾಗ ಹಝ್ರತ್ ಪೈಗಂಬರ್(ಸ) ಸಲಾತುಲ್ ಖೌಫ್ ನಿರ್ವಹಿಸಿದರು. ಅಂದರೆ, ಈ ನಮಾಝ್‌ನಲ್ಲಿ ಅರ್ಧ ಜನರು ಅರ್ಧ ನಮಾಝಿನಲ್ಲಿ ಭಾಗವಹಿಸಿದ ನಂತರ ಹಿಂದೆ ಸರಿದರು. ಅನಂತರ ಉಳಿದ ಅರ್ಧ ಜನರು ಬಂದು ಹಝ್ರತ್ ಪೈಗಂಬರ್(ಸ)ರೊಂದಿಗೆ ನಮಾಝ್‌ನಲ್ಲಿ ಸೇರಿಕೊಂಡರು. ಈ ನಮಾಝಿನ ಪ್ರಸ್ತಾಪವು ಸೂರತುನ್ನಿಸಾದಲ್ಲಿ ಬಂದಿದೆ. ಇಂತಹ ಭಯದ ಸ್ಥಿತಿಯಲ್ಲಿ ಹೇಗೆ ನಮಾಝ್ ನಿರ್ವಹಿಸಬೇಕು ಎಂದು ಅದರಲ್ಲಿ ವಿವರಿಸಲಾಗಿದೆ. ಬುಖಾರಿ ವ್ಯಾಖ್ಯಾನಕಾರರಾದ ಅಲ್ಲಾಮಾ ಬದ್ರುದ್ದೀನ್ ಐನಿ ಹೀಗೆ ಬರೆಯುತ್ತಾರೆ: ಮೊದಲ ಬಾರಿಗೆ ಯಾವ ವರ್ಷ ಸಲಾತುಲ್ ಖೌಫ್ ಬಗ್ಗೆ ಆದೇಶವು ಅವತೀರ್ಣವಾಯಿತು ಎಂಬುದರ ಕುರಿತು ಭಿನ್ನಾಭಿಪ್ರಾಯವಿದೆ. ಝಾತುರ್ರಿಖಾಅ್‌ನಲ್ಲಿ ಈ ನಮಾಝನ್ನು ಮೊದಲ ಬಾರಿಗೆ ನಿರ್ವಹಿಸಲಾಯಿತು ಎಂದು ಬಹುಪಾಲು ಉಲಮಾಗಳು ಹೇಳುತ್ತಾರೆ. ಆದರೆ ಅದರ ಆದೇಶವು ಯಾವಾಗ ಅವತೀರ್ಣವಾಯಿತು ಎಂಬುದರಲ್ಲಿ ಉಲಮಾಗಳಿಗೆ ಭಿನ್ನಾಭಿಪ್ರಾಯವಿದೆ. ಕೆಲವರು ಅದರ ಆದೇಶವನ್ನು ಹಿಜರಿ 4, ಕೆಲವರು 5, ಕೆಲವರು 6 ಮತ್ತು ಇನ್ನು ಕೆಲವರು ಹಿಜರಿ 7 ಎಂದು ಹೇಳಿದ್ದಾರೆ. ಹದಿನೈದು ದಿನಗಳ ಈ ಕಾರ್ಯಾಚರಣೆಯ ನಂತರ ಹಝ್ರತ್ ಪೈಗಂಬರ್(ಸ) ಮದೀನಾದ ಕಡೆಗೆ ಹಿಂತಿರುಗಿದರು.

ಈ ಯುದ್ಧವನ್ನು ಪವಾಡಗಳ ಯುದ್ಧ ಎಂದೂ ಕರೆಯಲಾಗಿದೆ. ಶತ್ರುವೊಬ್ಬನು ಹಝ್ರತ್ ಪೈಗಂಬರ್(ಸ)ರ ಮೇಲೆ ಖಡ್ಗ ಎತ್ತಿದ ಘಟನೆ ಇದೇ ಯುದ್ಧದ ಸಂದರ್ಭದಲ್ಲಿ ನಡೆದಿತ್ತು. ಇದೇ ಯುದ್ಧದ ಸಮಯದಲ್ಲಿ ಒಂದು ಪಕ್ಷಿಯ ಘಟನೆಯೂ ಸಂಭವಿಸಿತು. ಅದರ ವಿವರಣೆ ಹೀಗಿದೆ: ಈ ಯುದ್ಧದ ಸಮಯದಲ್ಲಿ ಸಹಾಬಿಯೊಬ್ಬರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಒಂದು ಪಕ್ಷಿಯ ಮರಿಯನ್ನು ತಂದರು. ಹಝ್ರತ್ ಪೈಗಂಬರ್(ಸ) ಆ ಕಡೆ ನೋಡುತ್ತಿದ್ದಾಗ ಆ ಪಕ್ಷಿಯ ತಾಯಿ ಅಥವಾ ತಂದೆ ಸ್ವತಃ ತನ್ನನ್ನು ಆ ಸಹಾಬಿಯ ಮುಂದೆ ಅರ್ಪಿಸಿಕೊಳ್ಳುವ ರೀತಿಯಲ್ಲಿ ಬಂದು ಬಿತ್ತು. ಜನರು ಈ ದೃಶ್ಯವನ್ನು ಆಶ್ಚರ್ಯದಿಂದ ನೋಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಇದರ ಬಗ್ಗೆ ಹೀಗೆ ಹೇಳಿದರು: ನೀವು ಈ ಪಕ್ಷಿಯ ಬಗ್ಗೆ ಆಶ್ಚರ್ಯಪಡುತ್ತೀರಿ, ನೀವು ಅದರ ಮರಿಯನ್ನು ಹಿಡಿದುಕೊಂಡಿದ್ದೀರಿ ಮತ್ತು ಈ ಪಕ್ಷಿ ತನ್ನ ಮರಿಯನ್ನು ಬಿಡಿಸಿಕೊಳ್ಳಲು ತನ್ನನ್ನು ತಾನು ನಿಮ್ಮ ಮುಂದೆ ಅರ್ಪಿಸಿಕೊಳ್ಳುತ್ತಿದೆ. ಅಲ್ಲಾಹನಾಣೆ, ಈ ಪಕ್ಷಿಗೆ ತನ್ನ ಮರಿಯ ಮೇಲೆ ಇರುವ ಕರುಣೆಗಿಂತಲೂ ಹೆಚ್ಚು ಕರುಣೆಯನ್ನು ನಿಮ್ಮ ಪ್ರಭು ನಿಮ್ಮ ಮೇಲೆ ತೋರಿಸುತ್ತಾನೆ.

ಅದೇ ರೀತಿ ಈ ಯುದ್ಧದ ಸಮಯದಲ್ಲಿ ಹುಚ್ಚು ಹಿಡಿದ ಮಗುವೊಂದು ಗುಣಮುಖವಾದ ಘಟನೆಯೂ ವಿವರಿಸಲ್ಪಟ್ಟಿದೆ. ಹಳ್ಳಿಯ ಮಹಿಳೆಯೊಬ್ಬಳು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು, ಇದು ನನ್ನ ಮಗ, ಅವನಿಗೆ ಹುಚ್ಚು ಹಿಡಿದಿದೆ ಎಂದು ಹೇಳಿದಳು. ಹಝ್ರತ್ ಪೈಗಂಬರ್(ಸ) ತಮ್ಮ ಲಾಲಾರಸವನ್ನು ಆ ಮಗುವಿನ ಬಾಯಿಗೆ ಹಾಕಿದರು ಮತ್ತು ಮೂರು ಬಾರಿ ಹೇಳಿದರು: ಎಲೈ ಅಲ್ಲಾಹನ ಶತ್ರು! ಇವನಿಂದ ದೂರವಾಗು, ನಾನು

ಅಲ್ಲಾಹನ ಪ್ರವಾದಿ. ಅನಂತರ ಹಝ್ರತ್ ಪೈಗಂಬರ್[ಸ] ಹೀಗೆ ಆದೇಶಿಸಿದರು: ಆ ಮಗುವನ್ನು ಕರೆದುಕೊಂಡು ಹೋಗು, ಇನ್ನು ಮುಂದೆ ಅವನಿಗೆ ಈ ತೊಂದರೆ ಎಂದಿಗೂ ಆಗದು.

ಹಝ್ರತ್ ಜಾಬಿರ್[ರ] ವರದಿ ಮಾಡುತ್ತಾರೆ: ಈ ಯುದ್ಧದ ವೇಳೆ ಅಲ್ಬ ಬಿನ್ ಝೈದ್ ಹಾರಿಸಿ ಹಝ್ರತ್ ಪೈಗಂಬರ್[ಸ]ರ ಸನ್ನಿಧಿಗೆ ಮೂರು ಮೊಟ್ಟೆಗಳನ್ನು ತಂದರು. ಹಝ್ರತ್ ಪೈಗಂಬರ್[ಸ] ಹೇಳಿದರು: ಹೇ ಜಾಬಿರ್, ಈ ಮೊಟ್ಟೆಗಳನ್ನು ತೆಗೆದುಕೊಂಡು ಹೋಗಿ ಬೇಯಿಸು. ಹಝ್ರತ್ ಜಾಬಿರ್[ರ] ಹೇಳುತ್ತಾರೆ, ನಾನು ಆ ಮೊಟ್ಟೆಗಳನ್ನು ಬೇಯಿಸಿದೆ ಮತ್ತು ತಿನ್ನಲು ರೊಟ್ಟಿಯನ್ನು ಹುಡುಕಿದೆ. ಆದರೆ ರೊಟ್ಟಿ ಸಿಗಲಿಲ್ಲ. ಆಗ ಹಝ್ರತ್ ಪೈಗಂಬರ್[ಸ] ಮತ್ತು ಅವರ ಸಹಾಬಿಯರು ರೊಟ್ಟಿ ಇಲ್ಲದೆ ಆ ಮೊಟ್ಟೆಗಳನ್ನು ತಿನ್ನಲು ಪ್ರಾರಂಭಿಸಿದರು. ಅವರು ತೃಪ್ತರಾಗುವ ವರೆಗೂ ತಿಂದರು, ಆದರೆ ಆ ಬಟ್ಟಲಿನಲ್ಲಿ ಮೊಟ್ಟೆಗಳು ಹಾಗೆಯೇ ಇದ್ದವು. ನಂತರ ಸಹಾಬಿಯರಲ್ಲಿ ಅನೇಕರು ಅದರಿಂದ ತಿಂದರು. ಅನಂತರ ನಾವು ಮುಂದಕ್ಕೆ ಹೊರಟೆವು. ಇದೇ ಪ್ರಯಾಣದ ಸಮಯದಲ್ಲಿ ಒಂದು ಒಂಟೆ ಹಝ್ರತ್ ಪೈಗಂಬರ್[ಸ]ರ ಬಳಿಗೆ ವೇಗವಾಗಿ ಬಂದು ಕೂಗಾಡಿತು. ಹಝ್ರತ್ ಪೈಗಂಬರ್[ಸ] ಹೇಳಿದರು: ಈ ಒಂಟೆ ಏನು ಹೇಳಿದೆ ಎಂದು ನಿಮಗೆ ಗೊತ್ತೇ? ಅದು ತನ್ನ ಯಜಮಾನನ ಬಗ್ಗೆ ದೂರು ನೀಡುತ್ತಿದೆ, ಅದರ ಯಜಮಾನ ಹಲವು ವರ್ಷಗಳಿಂದ ಅದರಿಂದ ಸೇವೆ ಪಡೆದಿದ್ದಾನೆ ಮತ್ತು ಈಗ ಅದನ್ನು ಕೊಯ್ಯಲು ನಿರ್ಧರಿಸಿದ್ದಾನೆ. ಹಝ್ರತ್ ಪೈಗಂಬರ್[ಸ] ಅದರ ಮಾಲೀಕನಿಂದ ಆ ಒಂಟೆಯನ್ನು ಖರೀದಿಸಿ ಅದನ್ನು ಕಾಡಿನಲ್ಲಿ ಮೇಯಲು ಬಿಟ್ಟರು.

ಇದೇ ಯುದ್ಧದಲ್ಲಿ ಹಝ್ರತ್ ಜಾಬಿರ್[ರ]ರ ಒಂಟೆ ಕಳೆದುಹೋಗಿತ್ತು. ಅವರು ವರದಿ ಮಾಡುತ್ತಾರೆ: ಒಂದು ರಾತ್ರಿ ನನ್ನ ಒಂಟೆ ಕಳೆದುಹೋಯಿತು. ನಾನು ಅದನ್ನು ಹುಡುಕುತ್ತಾ ಹಝ್ರತ್ ಪೈಗಂಬರ್[ಸ]ರ ಬಳಿಯಿಂದ ಹಾದುಹೋದೆ. ಹಝ್ರತ್ ಪೈಗಂಬರ್[ಸ] ವಿಚಾರಿಸಿದಾಗ, ನನ್ನ ಒಂಟೆ ಕಳೆದುಹೋಗಿದೆ ಎಂದು ತಿಳಿಸಿದೆ. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: ನಿನ್ನ ಒಂಟೆ ಆ ಒಂದು ಸ್ಥಳದಲ್ಲಿದೆ, ಅದನ್ನು ಹೋಗಿ ಕರೆದುಕೊಂಡು ಬಾ. ಹಝ್ರತ್ ಜಾಬಿರ್[ರ] ಹೇಳುತ್ತಾರೆ: ನಾನು ಆ ಸ್ಥಳಕ್ಕೆ ಹೋದೆ. ಆದರೆ ಅಲ್ಲಿ ನನಗೆ ಒಂಟೆ ಸಿಗಲಿಲ್ಲ, ನಾನು ಹಿಂತಿರುಗಿ ಬಂದಾಗ ಹಝ್ರತ್ ಪೈಗಂಬರ್[ಸ] ಪುನಃ ಅಲ್ಲಿಗೇ ಹೋಗಲು ಆದೇಶಿಸಿದರು. ನಾನು ಮತ್ತೆ ಅಲ್ಲಿಗೆ ಹೋದೆ ಆದರೆ ಒಂಟೆ ಸಿಗಲಿಲ್ಲ. ಆಗ ಹಝ್ರತ್ ಪೈಗಂಬರ್[ಸ] ನನ್ನೊಡನೆ ದಯೆ ತೋರುತ್ತಾ ನನ್ನ ಜೊತೆಗೆ ಅಲ್ಲಿಗೆ ಬಂದರು, ನಾವು ಒಂಟೆಯ ಬಳಿ ತಲುಪುವ ವರೆಗೂ ಹೋದೆವು. ಅನಂತರ ಹಝ್ರತ್ ಪೈಗಂಬರ್[ಸ] ನನಗೆ ಒಂಟೆಯನ್ನು ಹಿಡಿದುಕೊಟ್ಟರು. ಹೀಗೆ ಈ ಯುದ್ಧದಲ್ಲಿ ಅನೇಕ ಪವಾಡಗಳ ಪ್ರಸ್ತಾಪವಿದೆ, ಉದಾಹರಣೆಗೆ ಇದೇ ಯುದ್ಧದಲ್ಲಿ ಹಝ್ರತ್ ಜಾಬಿರ್[ರ]ರ ಒಂದು ಒಂಟೆ ಸುಸ್ತಾಗಿತ್ತು. ಹಝ್ರತ್ ಪೈಗಂಬರ್[ಸ] ಸ್ವಲ್ಪ ನೀರನ್ನು ತೆಗೆದುಕೊಂಡು ಅದರಲ್ಲಿ ಊದಿದರು ಮತ್ತು ಆ ಒಂಟೆಯ ಬೆನ್ನು, ತಲೆ ಮತ್ತು ಹಿಂಭಾಗಕ್ಕೆ ಆ ನೀರನ್ನು ಚಿಮುಕಿಸಿದರು. ಅನಂತರ ಹಝ್ರತ್ ಪೈಗಂಬರ್[ಸ] ಕೋಲಿನಿಂದ ಆ ಒಂಟೆಗೆ ಕೆಲವು ಬಾರಿ ಹೊಡೆದರು, ಆಗ ಆ ಒಂಟೆ ಚುರುಕುಗೊಂಡಿತು.

ಅದೇ ರೀತಿ ಈ ಯುದ್ಧದ ಸಮಯದಲ್ಲಿ ಪಾತ್ರೆಯಲ್ಲಿ ನೀರು ಹೆಚ್ಚಾದ ಮತ್ತು ಅದ್ಭುತಕರವಾದ ಬರ್ಕತ್ (ಅನುಗ್ರಹ) ಉಂಟಾದ ಘಟನೆಯೂ ಕಂಡುಬರುತ್ತದೆ. ಹಝ್ರತ್ ಪೈಗಂಬರ್[ಸ]ರ ಇಂತಹ ಅದ್ಭುತ ದೃಷ್ಟಾಂತಗಳಿಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: **ಲಿಖಾ** ಎಂಬ ಸ್ಥಾನಕ್ಕೆ ತಲುಪುವಾಗ ಮನುಷ್ಯನಿಂದ ಮಾನುಷಿಕ ಶಕ್ತಿಗಳಿಗೆ ಮೀರಿದ ಕಾರ್ಯಗಳು ಕೆಲವೊಮ್ಮೆ ನಡೆಯುತ್ತವೆ. ಅವು ದೈವಿಕ ಶಕ್ತಿಗಳ ಬಣ್ಣವನ್ನು ತನ್ನೊಳಗೆ ಇರಿಸಿಕೊಂಡಿರುತ್ತವೆ. ಉದಾಹರಣೆಗೆ ನಮ್ಮ ಸೈಯ್ಯದ್ ವ ಮೌಲಾ ಸೈಯ್ಯದುರ್ರುಸುಲ್ ಹಝ್ರತ್ ಖಾತಮುಲ್ ಅಂಬಿಯಾ[ಸ] ಬದ್ರ್ ಯುದ್ಧದಲ್ಲಿ ಒಂದು ಹಿಡಿ ಮರಳನ್ನು ಕಾಫಿರರ ಮೇಲೆ ಎಸೆದರು ಮತ್ತು ಆ ಹಿಡಿಯು ಯಾವುದೇ ಪ್ರಾರ್ಥನೆಯಿಂದಲ್ಲ, ಸ್ವಂತ ಆಧ್ಯಾತ್ಮಿಕ ಶಕ್ತಿಯಿಂದ ಎಸೆಯಲ್ಪಟ್ಟಿತು. ಆದರೆ ಆ ಹಿಡಿಯು ದೈವಿಕ ಶಕ್ತಿಯನ್ನು ತೋರಿಸಿತು ಮತ್ತು ವಿರೋಧಿ ಸೈನ್ಯದ ಮೇಲೆ ಅಸಾಧಾರಣ ಪರಿಣಾಮವನ್ನು ಬೀರಿತು, ಶತ್ರುಗಳಲ್ಲಿ ಯಾರ ಕಣ್ಣಿಗೂ ಅದರ ಪರಿಣಾಮ ತಲುಪದೆ ಇರಲಿಲ್ಲ ಮತ್ತು ಅವರೆಲ್ಲ ಕುರುಡರಂತೆ ಆದರು. ಅವರಲ್ಲಿ ಎಂತಹ ಗೊಂದಲ ಮತ್ತು ಆತಂಕ ಉಂಟಾಯಿತು ಎಂದರೆ, ಅವರು ಮತ್ತುಹಿಡಿದವರಂತೆ ಓಡಲು ಪ್ರಾರಂಭಿಸಿದರು. ಈ ದೃಷ್ಟಾಂತದ ಕುರಿತು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಸೂಚಿಸಿದ್ದಾನೆ: "**ವಮಾ ರಮೈತ ಇಧ್ ರಮೈತ ವಲಾಕಿನ್ನಲ್ಲಾಹ ರಮಾ**" (ನೀನು ಎಸೆದಾಗ ನೀನು ಎಸೆಯಲಿಲ್ಲ, ಬದಲಾಗಿ ಅಲ್ಲಾಹನೇ ಎಸೆದನು). ಅಂದರೆ, ತೆರೆಯ ಮರೆಯಲ್ಲಿ ದೈವಿಕ ಶಕ್ತಿಯು ಕಾರ್ಯನಿರ್ವಹಿಸಿತು. ಇದು ಮಾನವ ಶಕ್ತಿಯ ಕೆಲಸವಾಗಿರಲಿಲ್ಲ. ಅದೇ ರೀತಿಯ ಇನ್ನೊಂದು ಪವಾಡ ಹಝ್ರತ್ ಪೈಗಂಬರ್[ಸ] ಚಂದ್ರನನ್ನು ಇಬ್ಭಾಗಿಸಿದ್ದು ಆಗಿದೆ. ಅದು ದೈವಿಕ ಶಕ್ತಿಯಿಂದ ಪ್ರಕಟವಾಯಿತು. ಅದರೊಂದಿಗೆ ಯಾವುದೇ ದುಆ ಇದ್ದಿರಲಿಲ್ಲ. ಏಕೆಂದರೆ ಅದು ದೈವಿಕ ಶಕ್ತಿಯಿಂದ ತುಂಬಿದ್ದ ಬೆರಳಿನ ಸೂಚನೆಯಿಂದ ಮಾತ್ರ ಸಂಭವಿಸಿತು. ಇದೇ ರೀತಿಯ ಇನ್ನೂ ಅನೇಕ ದೃಷ್ಟಾಂತಗಳು ಹಝ್ರತ್ ಪೈಗಂಬರ್[ಸ] ತಮ್ಮ ವೈಯಕ್ತಿಕ ಅಧಿಕಾರದಿಂದ ತೋರಿಸಿದರು, ಅವುಗಳೊಂದಿಗೆ ಯಾವುದೇ ದುಆ ಇರಲಿಲ್ಲ. ಅನೇಕ ಬಾರಿ ಕೇವಲ ಒಂದು ಲೋಟದಲ್ಲಿ ಇದ್ದ ಸ್ವಲ್ಪ

ನೀರಿನಲ್ಲಿ ತಮ್ಮ ಬೆರಳುಗಳನ್ನು ಹಾಕುವುದರಿಂದ ಅದು ಎಷ್ಟು ಹೆಚ್ಚಾಯಿತು ಎಂದರೆ ಇಡೀ ಸೈನ್ಯ ಮತ್ತು ಒಂಟೆಗಳು ಹಾಗೂ ಕುದುರೆಗಳು ಆ ನೀರನ್ನು ಕುಡಿದವು. ಅನಂತರವೂ ಆ ನೀರು ತನ್ನ ಪ್ರಮಾಣದಲ್ಲಿ ಹಾಗೆಯೇ ಇತ್ತು. ಅನೇಕ ಬಾರಿ ಎರಡು ನಾಲ್ಕು ರೊಟ್ಟಿಗಳ ಮೇಲೆ ಕೈ ಇಡುವುದರಿಂದ ಸಾವಿರಾರು ಹಸಿದ ಮತ್ತು ಬಾಯಾರಿದವರ ಹೊಟ್ಟೆಯನ್ನು ತುಂಬಿಸಿದರು. ಕೆಲವೊಮ್ಮೆ ಸ್ವಲ್ಪ ಹಾಲಿಗೆ ತಮ್ಮ ತುಟಿಗಳಿಂದ ಬರ್ಕತ್ ನೀಡಿ ಒಂದು ಗುಂಪಿನ ಹೊಟ್ಟೆಯನ್ನು ಅದರಿಂದ ತುಂಬಿಸಿದರು. ಕೆಲವೊಮ್ಮೆ ಉಪ್ಪುನೀರಿನ ಬಾವಿಯ ನೀರಿನಲ್ಲಿ ತಮ್ಮ ಬಾಯಿಯ ಲಾಲಾರಸವನ್ನು ಹಾಕುವುದರಿಂದ ಅದನ್ನು ಬಹಳ ಸಿಹಿಯಾಗಿಸಿದರು. ಕೆಲವೊಮ್ಮೆ ತೀವ್ರವಾಗಿ ಗಾಯಗೊಂಡವರ ಮೇಲೆ ತಮ್ಮ ಕೈಯನ್ನು ಇಟ್ಟು ಅವರನ್ನು ಗುಣಪಡಿಸಿದರು. ಕೆಲವೊಮ್ಮೆ ಯುದ್ಧದ ಆಘಾತದಿಂದ ಕಣ್ಣುಗಳು ಹೊರಬಿದ್ದಿದ್ದವರ ಕಣ್ಣುಗಳನ್ನು ತಮ್ಮ ಕೈಯ ಅನುಗ್ರಹದಿಂದ ಸರಿಪಡಿಸಿದರು. ಇದೇ ರೀತಿಯ ಇನ್ನೂ ಅನೇಕ ಕಾರ್ಯಗಳನ್ನು ತಮ್ಮ ವೈಯಕ್ತಿಕ ಅಧಿಕಾರದಿಂದ ಮಾಡಿದರು, ಅವುಗಳೊಂದಿಗೆ ಒಂದು ರಹಸ್ಯವಾದ ದೈವಿಕ ಶಕ್ತಿಯು ಬೆರೆತಿತ್ತು. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.**

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ○ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

*Friday Sermon delivered by Hadrath Khaleefatul Masih Al Khamis*[(atba)]

At, ***'Masjid Mubarak'***, *Islamabad*, *Tilford*, U.K. On 11-04-2025

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim | ***Layout***: Basheer K.P. Manjeshwar

***Published By***: Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon